ಮಹಾವೀರ ಕಾಸರ, ಶಿವಮೊಗ್ಗ
ರೈತ ದೇಶದ ಬೆನ್ನೆಲುಬಾದರೆ ರಕ್ತ ಮಾಂಸ ಯಾರು?




ಸಾಲವೇ ರಕ್ತ, ಸಾಲ ಮನ್ನಾವೇ ಮಾಂಸ.

ಮಂಡಿ ಕುಮಾರ್, ಬೆಂಗಳೂರು
ಜೀವನದಲ್ಲಿ ಅತಿ ಹೆಚ್ಚು ನೋವು ಅನುಭವಿಸುವುದು ಗಂಡೋ ಹೆಣ್ಣೋ?
ಋತು, ಹೆರಿಗೆ, ಕಾಮದೃಷ್ಟಿಗಳೆಂಬ ತಾಪತ್ರಯ ಎದುರಿಸುವ ಹೆಣ್ಣೇ.

ಪಿ. ಜಯವಂತ ಪೈ, ಕುಂದಾಪುರ
ಜ್ಞಾನಿಗೂ, ವಿಜ್ಞಾನಿಗೂ ವ್ಯತ್ಯಾಸವೇನು?
ಇರುವ ಅರಿವನ್ನು ಬಳಸುವವನು ಜ್ಞಾನಿ, ಬೆಳೆಸುವವನು ವಿಜ್ಞಾನಿ.

ಮಲ್ಲಿಕಾರ್ಜುನ, ಸುರಧೇನುಪುರ
ಟೋಲ್‌ಗೆ ಸುಂಕ; ಟ್ರೋಲ್‌ಗೆ?
ಗಳಿಗೆಗೊಬ್ಬ ಕೊಂಕ.

ಜಯಲಕ್ಷ್ಮಿ ಉಪಾಧ್ಯಾಯ, ಕಂಚಾರತಿ
ಕುಡಿಯಬೇಡವೋ ಎಂದರೆ ಕುಡಿದವರೂ ಸಾಯುತ್ತಾರೆ, ಕುಡಿಯದವರೂ ಸಾಯುತ್ತಾರೆ ಎನ್ನುತ್ತಾರಲ್ಲಾ...?




ಜೀವವಿಮೆ ಮಾಡಿಸಿ ಕುಡಿ ಎನ್ನಿ. ಅವನು ಸತ್ತು ಮನೆ ಉಳಿದೀತು.

ಪಿ.ಜೆ. ರಾಘವೇಂದ್ರ, ಮೈಸೂರು
ಸುದ್ದಿಯಲ್ಲಿ ಸ್ಫೋಟಕಗಳನ್ನು ಬಳಸುವ ವಾಹಿನಿಗಳನ್ನು ಭಯೋತ್ಪಾದಕರೆನ್ನಬಹುದೆ?
ಠುಸ್ಸೆನ್ನುವ ಪಟಾಕಿಗಳನ್ನೇ ಹೆಚ್ಚು ಬಳಸುವುದರಿಂದ ಕ್ರ್ಯಾಕ್ಸ್, ಕ್ರ್ಯಾಕರ್ಸ್, ಕ್ರ್ಯಾಕೆಸ್ಟ್ ಎನ್ನಬಹುದು.

ಬಿ.ಆರ್. ಉಷಾ, ಬೆಂಗಳೂರು
ಬಿಸಿಲಲ್ಲಿ ಹೋದರೆ ಮುಖ ಕಪ್ಪಗಾಗುತ್ತೆ. ಆದರೆ ಬಿಳಿ ಕೂದಲು ಮಾತ್ರ ಕಪ್ಪಗಾಗಲ್ಲ. ಯಾಕೆ ಗುರು?
ಚರ್ಮ ಮೇಲ್ಮೈ; ಕೂದಲು ಬೇರು ಬಿಟ್ಟಿದ್ದು. ಮಾನವನಲ್ಲಿ ಬೇರು ಬಿಟ್ಟ ಗುಣಗಳು ಬದಲಾಗುವುದಿಲ್ಲ.

ಎಂ.ಎಸ್. ಗುರುರಾಜಾಚಾರು, ಬಳ್ಳಾರಿ
ದೇಶದಲ್ಲಿ ಮೋಸ ಮಾಡದ ಬ್ಯಾಂಕ್ ಯಾವುದು ಸಾರ್?
ಬ್ಲಡ್ ಬ್ಯಾಂಕ್.

ಫಾಲನೇತ್ರ ಸಜ್ಜನ, ಶಿರಸಿ
ಪಂಚೇಂದ್ರಿಯಗಳಿಗೂ ಪಂಚ್ ಕೊಡುವ ವಸ್ತು ಯಾವುದು?
ವಿರಹ.

ಬಸವನಗೌಡ, ಹೆಬ್ಬಳಗೆರೆ
ಒಂದೊಮ್ಮೆ ಮನುಷ್ಯನಿಗೆ ಹಸಿವೆಂಬುದು ಇರದೇ ಹೋಗಿದ್ದರೆ?
ದಾಹ ಇರುತ್ತಿತ್ತಲ್ಲ; ಪ್ರಪಂಚ ಹಾಳಾಗಲು ಕೀರ್ತಿದಾಹವೊಂದೇ ಸಾಕು.

ಎಚ್.ಆರ್. ವಸ್ತ್ರದ, ಧಾರವಾಡ
ದೇಶ ಕೊರೊನಾ, ನೆರೆ ಹಾವಳಿಗೆ ತತ್ತರಿಸುತ್ತಿದ್ದಾಗ ರಾಜಕಾರಣಿಗಳು ಮಂತ್ರಿಗಿರಿಗೆ ಲಾಬಿ ನಡೆಸಿದರಲ್ಲಾ...?
ಸೆಣಸಾಡುವ ಮದಗಜಗಳಿಗೆ ಹಾಳಾಗುವ ಹುಲ್ಲಿನ ಪರಿವೆ ಇರುವುದಿಲ್ಲ.

ಮಹೇಶ್ವರ ಹುರುಕಡ್ಲಿ, ಬಾಚಿಗೊಂಡನಹಳ್ಳಿ
ಜನರ ಕಷ್ಟಗಳಿಗೆ ಕರಗದ ರಾಜಕಾರಣಿಗಳು ತಮ್ಮ ಹುದ್ದೆಗೆ ರಾಜಿನಾಮೆ ನೀಡುವಾಗ ಕಣ್ಣೀರಾಗುವುದೇಕೆ?
ಬಹಿರಂಗ ಸುದ್ದಿಗೆ ಕಿವುಡಾದರೂ ಅಂತರಂಗ ಸದ್ದಿಗೆ ಕಿವುಡಾಗಲು ಸಾಧ್ಯವಿಲ್ಲವಲ್ಲ.

ಜಿ.ಆರ್. ಆದಿನಾರಾಯಣಮುನಿ, ಬೆಂಗಳೂರು
ಯಾವ ತಪ್ಪನ್ನೂ ಮಾಡದವರು ಎಲ್ಲಿ ಕಾಣಸಿಗುತ್ತಾರೆ?
ಹೆರಿಗೆ ಆಸ್ಪತ್ರೆಯ ತೊಟ್ಟಿಲುಗಳಲ್ಲಿ.

ರಮೇಶ ಜ. ಬೊಂಗಾಳೆ, ಬೈಲಹೊಂಗಲ
ಮನುಷ್ಯನಿಗೆ ಬರುವ ಕಷ್ಟಗಳು ನೀರಿನಂತೆ ಹರಿದುಹೋಗಬೇಕಾದರೆ ಏನು ಮಾಡಬೇಕು?
ಅದಕ್ಕಿಂತ ಕಷ್ಟ ಬಂದವರ ಬದುಕನ್ನು ನೋಡಬೇಕು.

## ವಾರದ ಪ್ರಶ್ನೆ

ಆರ್. ಮಧುಸೂದನ್, ಹಾಸನ
ರಾಜಕಾರಣದಲ್ಲಿ ಮೂಗು ತೂರಿಸುತ್ತಿರುವ ಸ್ವಾಮೀಜಿಗಳೆಲ್ಲ ಸೇರಿ ಒಂದು ಪಕ್ಷ ಕಟ್ಟಿದರೆ ಏನಾಗಬಹುದು?
ಹಿಂದೂಧರ್ಮಕ್ಕೆ ಪಿತೃಪಕ್ಷ ಆಗಬಹುದು.

ರಾಜೀವ ಮಾಗಲ್, ಸಕಲೇಶಪುರ
ಸಕಲ ಸುರಕ್ಷತೆಗಳಿರುವ ಕಾರಲ್ಲಿ ವೇಗವಾಗಿ ಚಲಿಸಿ ಆಸ್ಪತ್ರೆ ಸೇರುವುದು ಒಳಿತೋ, ಮಿತವೇಗದಲ್ಲಿ ಚಲಿಸಿ ಮನೆ ಸೇರುವುದು ಒಳಿತೊ?
ಹೆಲ್ತ್ ಇನ್ಶೂರೆನ್ಸ್, ಲೈಫ್ ಇನ್ಶೂರೆನ್ಸ್ ಪಡೆದವರ ದೃಷ್ಟಿಯಿಂದಾದರೆ ಮೊದಲನೆಯದೇ ಒಳಿತು.

ಎಂ.ಜಿ. ನೇಹವರ್ಷಿಣಿ, ಬಳ್ಳಾರಿ
ರಾಜಕೀಯದ ಚದುರಂಗ ಎಂದರೆ ನಿಜವಾದ ಅರ್ಥ?
ಚೆಕ್‌ಮೇಟ್ ಬದಲಿಗೆ ಕ್ಯಾಶ್‌ಮೇಟ್‌ಗಳು ಮಾತ್ರ ಆಡುವ ಆಟ ಎಂದು.

ಬಿ.ಚಂದ್ರೇಗೌಡ, ಬೆಂಗಳೂರು
ಅವಿಶ್ರಾಂತವಾಗಿ ದುಡಿಯುವ ಸೂರ್ಯಚಂದ್ರರಿಗೂ, ನಿಯಮಿತವಾಗಿ ಬಡಿಯುವ ಹೃದಯಕ್ಕೂ ವ್ಯತ್ಯಾಸ?




ಹೃದಯಬಡಿತದ ವೇಗ ಏರುಪೇರಾಗಲು ಲೈಸೆನ್ಸ್ ಇದೆ,

ಮೋಹನರಾಜು ಎಸ್.ಎ. ಶಂಕರಘಟ್ಟ
ಕುದುರೆಯನ್ನು ಕಂಡರೆ ಕಾಲುನೋವು. ಸುಂದರಿಯನ್ನು ಕಂಡರೆ...?
Call Now!

ಕೆ. ರಾಮದಾಸ ಉಡುಪ, ಬೆಂಗಳೂರು
ರಾಜಕಾರಣಿಗಳಿಗೆ ಪಿತ್ತ ನೆತ್ತಿಗೇರಿದರೆ ಏನಾಗಬಹುದು?
ಕುತ್ತಾ ಆಗಬಹುದು.

**ರಾಮ್**

ಪ್ರಶ್ನೆ ಕಳುಹಿಸಲು: editorsu@sudha.co.in